ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY

Azadi Ka Amrit Mahotsav

NAAC Accredited with "A" Grade 2022

ಸಿಂಡಿಕೇಟ ವಿಭಾಗ

ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-65/2025-26/137 ದಿನಾಂಕ: 31 JAN 2026

## :: ಸಿಂಡಿಕೇಟ ಸಭೆಯ ನಡಾವಳಿಗಳು ::

ಕರ್ನಾಟಕ ವಿಶ್ವವಿದ್ಯಾಲಯದ ವಿಶೇಷ ಸಿಂಡಿಕೇಟ್ ಸಭೆಯನ್ನು **ದಿನಾಂಕ 17 ಜನೇವರಿ, 2026 ರಂದು ಮುಂಜಾನೆ 11:00 ಗಂಟೆಗೆ** ಸಿಂಡಿಕೇಟ ಸಭೆಯನ್ನು ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ಸಿಂಡಿಕೇಟ ಸಭೆಗೆ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1) | ಪ್ರೊ. ಐರಾನಿ ಮೊಹಮ್ಮದ್ ಖಾನ್, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2) | ಡಾ(ಶ್ರೀಮತಿ). ಕರೀಮುನ್ನಿಸ್ಸಾ ಸಯ್ಯದ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 3) | ಡಾ. ಎಮ್. ಎಚ್. ಅಗಡಿ, ಡೀನರು | ಸದಸ್ಯರು |
| 4) | ಶ್ರೀಮತಿ. ಅಂಜನಾ ಎಸ್. ಬಸನಗೌಡರ, ಹುಬ್ಬಳ್ಳಿ | ಸದಸ್ಯರು |
| 5) | ಶ್ರೀಮತಿ. ರತ್ನಾ ಪಾಟೀಲ, ಧಾರವಾಡ | ಸದಸ್ಯರು |
| 6) | ಡಾ. ಲಿಂಗರಾಜ ಸಿ. ಮುಳ್ಳಳ್ಳಿ, ಪ್ರಾಚಾರ್ಯರು, ಹುಬ್ಬಳ್ಳಿ | ಸದಸ್ಯರು |
| 7) | ಡಾ.(ಶ್ರೀಮತಿ). ಎನ್. ಸಿ. ಪಾಟೀಲ, ಪ್ರಾಚಾರ್ಯರು, ಧಾರವಾಡ | ಸದಸ್ಯರು |
| 8) | ಡಾ. ಬಿ. ಬಿ. ಹೊಳಗುಂದಿ, ಪ್ರಾಚಾರ್ಯರು, ಗದಗ | ಸದಸ್ಯರು |
| 9) | ಡಾ. ಬಿ. ಎಲ್. ಗುಂಡೂರ, ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| 10) | ಶ್ರೀ. ಮಹೇಶ ವಾಯ್. ಹುಲೇನ್ನವರ, ಧಾರವಾಡ | ಸದಸ್ಯರು |
| 11) | ಶ್ರೀ. ರಾಬರ್ಟ ದದ್ದಾಪುರಿ, ಧಾರವಾಡ | ಸದಸ್ಯರು |
| 12) | ಡಾ. ಬಸವರಾಜ ಗೊರವರ, ಕುಂದಗೋಳ | ಸದಸ್ಯರು |
| 13) | ಡಾ. ಶಿವಾನಂದ ವಿ. ನಾಯಕ, ಅಂಕೋಲಾ | ಸದಸ್ಯರು |
| 14) | ಶ್ರೀ. ಶ್ಯಾಮ್ ಮಲ್ಲನಗೌಡರ, ಧಾರವಾಡ | ಸದಸ್ಯರು |
| 15) | ಡಾ. ಎನ್. ವಾಯ್. ಮಟ್ಟಿಹಾಳ, ಕುಲಸಚಿವರು(ಮೌಲ್ಯಮಾಪನ), ಕ.ವಿ.ವಿ. ಧಾರವಾಡ | ಸದಸ್ಯರು |
| 16) | ಡಾ. ಶಂಕರ ವನಿಕ್ಯಾಳ, ಕೆಎಎಸ್, ಕುಲಸಚಿವರು(ಆಡಳಿತ). ಕ.ವಿ.ವಿ. ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಸದಸ್ಯರುಗಳು ಇರುವುದನ್ನು ಖಚಿತಪಡಿಸಿಕೊಂಡು ಅಂದರೆ 16 ಜನ ಸದಸ್ಯರುಗಳು (01 ಸದಸ್ಯರು ಆನ್‌ಲೈನ್ ಮತ್ತು 15 ಸದಸ್ಯರು ಖುದ್ದು ಹಾಜರಿರುವುದನ್ನು) ಖಚಿತಪಡಿಸಿಕೊಂಡು ಮುಂಜಾನೆ 11:00 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಸಭೆಯ ಅಧ್ಯಕ್ಷರಾದ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

-

-

-

-

-

-

-

ಕುಲಸಚಿವರು



ಕುಲಪತಿಗಳು

## <u>ದಿನಾಂಕ 17.01.2026 ರಂದು ಜರುಗುವ ವಿಶೇಷ ಸಿಂಡಿಕೇಟ ಸಭೆ</u>

**ಮಾನ್ಯ ಕುಲಪತಿಗಳಿಂದ ಪ್ರಾರಂಭ:**

**ಕರ್ನಾಟಕ ವಿಶ್ವವಿದ್ಯಾಲಯದ ಹಿರಿಯ ಡೀನರನ್ನು ಪ್ರಾಚಾರ್ಯರನ್ನು ಸದಸ್ಯರೆಂದು ಸ್ವಾಗತ.**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಡಿ) ರ ಅಡಿಯಲ್ಲಿ ವಿಶ್ವವಿದ್ಯಾಲಯದ ಡೀನರನ್ನು ಜೇಷ್ಠತೆಯ ಅನುಗುಣವಾಗಿ **ಡಾ. ಎಮ್. ಎಚ್. ಅಗಡಿ, ಡೀನರು ಕಲಾ ನಿಖಾಯ, ಸ್ನಾತಕೋತ್ತರ ಸಂಗೀತ ಮತ್ತು ಲಲಿತ ಕಲಾ ಅಧ್ಯಯನ ವಿಭಾಗ** ಇವರನ್ನು ಸಿಂಡಿಕೇಟ ಸಭೆಗೆ ಸದಸ್ಯರೆಂದು ನಾಮನಿರ್ದೇಶನ ಮಾಡಲಾಗಿದ್ದು ಇವರಿಗೆ ಸಿಂಡಿಕೇಟ ಸಭೆಗೆ ತುಂಬು ಹೃದಯದಿಂದ ಸ್ವಾಗತ ಕೋರಲಾಯಿತು.

**ಸಿಂಡಿಕೇಟ ಸದಸ್ಯರ ಸದಸ್ಯತ್ವದ ಅವಧಿ ಕೊನೆಗೊಂಡ ಪ್ರಯುಕ್ತ ವಂದನೆ.**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಡಿ) ರ ಅಡಿಯಲ್ಲಿ ಡೀನರ ಆಧಾರದ ಮೇಲೆ ಸಿಂಡಿಕೇಟ ಸದಸ್ಯರೆಂದು ನಾಮನಿರ್ದೇಶನಗೊಂಡಿದ್ದ **ಡಾ. ಎ. ಎ. ಮೂಲಿಮನಿ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಖಾಯ, ಸ್ನಾತಕೋತ್ತರ ಭೂಗೋಳಶಾಸ್ತ್ರ ಅಧ್ಯಯನ ವಿಭಾಗ** ಇವರ ಸಿಂಡಿಕೇಟ ಸದಸ್ಯತ್ವ ದಿನಾಂಕ: **02.01.2026** ರಂದು ಕೊನೆಗೊಂಡಿರುತ್ತದೆ. ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಎಚ್) ರ ಅಡಿಯಲ್ಲಿ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರನ್ನು ಜೇಷ್ಠತೆಯ ಅನುಸಾರ ಸಿಂಡಿಕೇಟ ಸದಸ್ಯರೆಂದು ನಾಮನಿರ್ದೇಶನಗೊಂಡಿದ್ದ **ಡಾ. ಶೌಖತ್ ಅಝೀಮ್, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ** ಇವರ ಸಿಂಡಿಕೇಟ ಸದಸ್ಯತ್ವ ದಿನಾಂಕ: 05.01.2026 ರಂದು ಕೊನೆಗೊಂಡ ಪ್ರಯುಕ್ತ ಇವರುಗಳನ್ನು ವಿಶ್ವವಿದ್ಯಾಲಯದ ಹಾಗೂ ಸಿಂಡಿಕೇಟ ಸದಸ್ಯರುಗಳ ಪರವಾಗಿ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ನೀಡಿದ ಅಮೂಲ್ಯ ಸಲಹೆ, ಸೂಚನೆ ಹಾಗೂ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

-

-

-

-

-

-

-

-

-

-

**ಕುಲಸಚಿವರು** **ಕುಲಪತಿಗಳು**

| | | |
|---|---|---|
| 1) | ವಿಷಯ | ಕರ್ನಾಟಕ ವಿಶ್ವವಿದ್ಯಾಲಯದ 2024ನೇ ಸಾಲಿನ 75ನೇಯ ವಾರ್ಷಿಕ ಘಟಿಕೋತ್ಸವದಲ್ಲಿ ಅಧಿಕೃತಗೊಳ್ಳಲಿರುವ ಪಿಎಚ್.ಡಿ/ ಎಮ್.ಫಿಲ್ ಪದವಿಗಳ ಹಾಗೂ ಸ್ನಾತಕ/ ಸ್ನಾತಕೋತ್ತರ ಪದವಿಗಳು/ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳ ಪದವಿಗಳನ್ನು ಪರಿಶೀಲಿಸುವ ಕುರಿತು. |
| ನಿರ್ಣಯ | | ಕರ್ನಾಟಕ ವಿಶ್ವವಿದ್ಯಾಲಯದ 2024ನೇ ಸಾಲಿನ 75ನೇಯ ವಾರ್ಷಿಕ ಘಟಿಕೋತ್ಸವದಲ್ಲಿ ಅನುಶಾಸನದಂತೆ ಅಧಿಕೃತಗೊಳ್ಳಲಿರುವ ಪಿಎಚ್.ಡಿ/ ಎಮ್.ಫಿಲ್ ಪದವಿಗಳ ಹಾಗೂ ಸ್ನಾತಕ/ ಸ್ನಾತಕೋತ್ತರ ಪದವಿಗಳು/ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳ ಪದವಿಗಳನ್ನು ದಿನಾಂಕ:16.01.2026 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2) | ವಿಷಯ | 2026-27ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಯೋಜನೆಗೊಂಡ ಎಲ್ಲ ಮಹಾವಿದ್ಯಾಲಯಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಅಧ್ಯಾಯ 10 ಪರಿಚ್ಛೇದ 59ರನ್ವಯ ಹಾಗೂ ಸರ್ಕಾರ ನಿಗದಿಪಡಿಸಿದ ಮಾನದಂಡಗಳ ಪ್ರಕಾರ ಸ್ಥಾನಿಕ ವಿಚಾರಣಾ ಸಮಿತಿಗಳ ಶಿಫಾರಸ್ಸು ಮತ್ತು UUCMS ತಂತ್ರಾಂಶದಲ್ಲಿ ನಮೂದಾದ ಅಂಕಗಳ ಆಧಾರದ ಮೇಲೆ ಸಂಯೋಜನೆಗೆ ಸಂಬಂಧಪಟ್ಟ ಪ್ರಕ್ರಿಯೆಗಳ ಅನುಮೋದನೆಗಾಗಿ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಪರಿಶೀಲನೆ ಕುರಿತು. |
| ನಿರ್ಣಯ | | 2026-27ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಯೋಜನೆಗೊಂಡ ಎಲ್ಲ ಮಹಾವಿದ್ಯಾಲಯಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಅಧ್ಯಾಯ 10 ಪರಿಚ್ಛೇದ 50ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ ಇಡಿ 29 ಯುಎನ್ಇ 2021 ಬೆಂಗಳೂರು ದಿನಾಂಕ: 12-02-2021 ರಲ್ಲಿ ಸೂಚಿಸಿದ ಮಾನದಂಡಗಳ ಪ್ರಕಾರ ಸ್ಥಾನಿಕ ವಿಚಾರಣಾ ಸಮಿತಿಗಳ ಶಿಫಾರಸ್ಸು ಮತ್ತು UUCMS ತಂತ್ರಾಂಶದಲ್ಲಿ ನಮೂದಾದ ಅಂಕಗಳ ಆಧಾರದ ಮೇಲೆ ಸಂಯೋಜನೆಗೆ ಸಂಬಂಧಪಟ್ಟ ಪ್ರಕ್ರಿಯೆಗಳ ಅನುಮೋದನೆಗಾಗಿ ಸಲ್ಲಿಸಿದ ವಿಷಯವನ್ನು ದಿನಾಂಕ: 16.01.2026 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಪರಿಶೀಲಿಸಿ ಸಿಂಡಿಕೇಟ ಸಭೆಯಲ್ಲಿ ಈ ಕೆಳಗಿನಂತೆ ಅನುಮೋಧಿಸಲಾಯಿತು.<br>"ಸರ್ಕಾರದ ಆದೇಶದ ಪ್ರಕಾರ ವಾರ್ಷಿಕ ಸಂಯೋಜನೆ ಮುಂದುವರಿಕೆಗಾಗಿ ನಿಗದಿತ ಮಾನದಂಡಗಳನ್ನು ಪೂರೈಸಿರುವ (ಅನುಬಂಧ-A ದಲ್ಲಿ) ತೋರಿಸಿದ ಮಹಾವಿದ್ಯಾಲಯಗಳನ್ನು ಅನುಮೋದಿಸಲಾಯಿತು.<br>ಹೊಸದಾಗಿ ಮಹಾವಿದ್ಯಾಲಯ ಪ್ರಾರಂಭಿಸಲು (ಅನುಬಂಧ-B ಯಲ್ಲಿ) ಸಲ್ಲಿಸಿದ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕಳುಹಿಸಲು ನಿರ್ಣಯಿಸಲಾಯಿತು. ಅನುಬಂಧ-C ಯಿಂದ J ವರೆಗಿನ ಎಲ್ಲ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕಳುಹಿಸಲು ಅನುಮೋದಿಸಲಾಯಿತು. ಅನುಬಂಧ-K ದಲ್ಲಿ ತೋರಿಸಿದ ಕಡಿಮೆ ಅಂಕ ಗಳಿಸಿದ 05 ಮಹಾವಿದ್ಯಾಲಯಗಳಿಗೆ ನೋಟೀಸ್ ನೀಡಿ ಅವರಿಂದ ಸಮಂಜಸ ಉತ್ತರ ಪಡೆದು ಮುಂದಿನ ಕ್ರಮ ಕೈಗೊಳ್ಳಲು ಅನುಮೋದಿಸಲಾಯಿತು.<br>ಮಹಾವಿದ್ಯಾಲಯಗಳಿಗೆ ಷರತ್ತುಬದ್ಧ ಅಧಿಸೂಚನೆ ನೀಡಲು ಅನುಮೋದಿಸಲಾಯಿತು.<br>ಅನುಬಂಧ-L ದಲ್ಲಿ ತೋರಿಸಲಾದ ಚನ್ನಬಸವೇಶ್ವರ ಪದವಿ ಮಹಾವಿದ್ಯಾಲಯ, ಹುಬ್ಬಳ್ಳಿ ಈ ಮಹಾವಿದ್ಯಾಲಯಕ್ಕೆ ಭೇಟಿ ನೀಡಿದ ಸ್ಥಾನಿಕ ವಿಚಾರಣಾ ಸಮಿತಿ ಮುಂದುವರಿಕೆಗಾಗಿ ಶಿಫಾರಸ್ಸು ಮಾಡದೇ ಇರುವುದರಿಂದ ತಮ್ಮ ಮಹಾವಿದ್ಯಾಲಯದ ಸಂಯೋಜನೆ ಸ್ಥಗಿತಗೊಳಿಸುವ ಬಗ್ಗೆ ಗಂಭೀರವಾಗಿ ಚರ್ಚಿಸಲಾಗಿದ್ದು, ಈ ವಿಷಯ ಕುರಿತು ಸ್ಥಾನಿಕ ವಿಚಾರಣಾ ಸಮಿತಿಯವರು ಆಕ್ಷೇಪಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಆಡಳಿತ ಮಂಡಳಿಗೆ ನೋಟೀಸ್ ನೀಡಿ ಅವರಿಂದ ಸಮಂಜಸ ಉತ್ತರ ಪಡೆದು ಮುಂದಿನ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು". |



ಕುಲಸಚಿವರು

ಕುಲಪತಿಗಳು

| | | |
|---|---|---|
| 3) | ವಿಷಯ | 2024-2025 ನೇ ಸಾಲಿನ (ದಿನಾಂಕ 01-04-2024 ರಿಂದ 31-03-2025 ರ ವರೆಗಿನ) ಮಾಹಿತಿಯನ್ನೊಳಗೊಂಡ ಕರ್ನಾಟಕ ವಿಶ್ವವಿದ್ಯಾಲಯದ ವಾರ್ಷಿಕ ವರದಿಯ ಕರಡನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ 50(1) ನೇ ಅಧಿನಿಯಮದ ಪ್ರಕಾರ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಪರಿಶೀಲಿಸುವ ಕುರಿತು. |
| ನಿರ್ಣಯ | | 2024-2025 ನೇ ಸಾಲಿನ (ದಿನಾಂಕ 01-04-2024 ರಿಂದ 31-03-2025 ರ ವರೆಗಿನ) ಮಾಹಿತಿಯನ್ನೊಳಗೊಂಡ ಕರ್ನಾಟಕ ವಿಶ್ವವಿದ್ಯಾಲಯದ ವಾರ್ಷಿಕ ವರದಿಯ ಕರಡನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ 50(1) ನೇ ಅಧಿನಿಯಮದ ಪ್ರಕಾರ ಸದರಿ ವಿಷಯವನ್ನು ದಿನಾಂಕ:16.01.2026 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 4) | ವಿಷಯ | 2025-26 ನೇ ಸಾಲಿನಿಂದ ಹೊಸದಾಗಿ ಪ್ರಾರಂಭಗೊಂಡ 4 ವರ್ಷಗಳ B.A B.Ed ಮತ್ತು B.Sc B.Ed (ITEP) ಪದವಿಗಳಿಗೆ ವಿನಿಯಮಾವಳಿಗಳ ಅನುಮೋದನೆಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕಾರ 44(1)C ರಂತೆ ಗೌರವಾನ್ವಿತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರಕಾರಕ್ಕೆ ಕಳುಹಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಸಿದ ನಿರ್ಣಯವನ್ನು ಪರಿಶೀಲಿಸುವ ಕುರಿತು. |
| ನಿರ್ಣಯ | | 2025-26 ನೇ ಸಾಲಿನಿಂದ ಹೊಸದಾಗಿ ಪ್ರಾರಂಭಗೊಂಡ 4 ವರ್ಷಗಳ B.A B.Ed ಮತ್ತು B.Sc B.Ed (ITEP) ಪದವಿಗಳಿಗೆ ವಿನಿಯಮಾವಳಿಗಳ ಅನುಮೋದನೆಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕಾರ 44(1)C ರಂತೆ ಗೌರವಾನ್ವಿತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರಕಾರಕ್ಕೆ ಕಳುಹಿಸಲು ದಿನಾಂಕ:16.01.2026 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು. |
| 5) | ವಿಷಯ | 2026-27ನೇ ಸಾಲಿನಿಂದ ಪ್ರಾರಂಭಗುವ M.Sc Audiology (MASLP) & M.Sc Speech Language Pathology (MASLP) ಪದವಿಗಳ ವಿನಿಯಮಾವಳಿಗಳಿಗೆ ಅನುಮೋದನೆಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕಾರ 44(1)C ರಂತೆ ಗೌರವಾನ್ವಿತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರಕಾರಕ್ಕೆ ಕಳುಹಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಸಿದ ನಿರ್ಣಯವನ್ನು ಪರಿಶೀಲಿಸುವ ಕುರಿತು. |
| ನಿರ್ಣಯ | | 2026-27ನೇ ಸಾಲಿನಿಂದ ಪ್ರಾರಂಭಗುವ M.Sc. Audiology (MASLP) & M.Sc. Speech Language Pathology (MASLP) ಪದವಿಗಳ ವಿನಿಯಮಾವಳಿಗಳಿಗೆ ಅನುಮೋದನೆಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕಾರ 44(1)C ರಂತೆ ಗೌರವಾನ್ವಿತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರಕಾರಕ್ಕೆ ಕಳುಹಿಸಲು ದಿನಾಂಕ:16.01.2026 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು. |
| 6) | ವಿಷಯ | To provide 800 sq. ft. space for establishing Start-up company by ETC Sustainable Development Foundation, Pune, affiliated to ETC Consultants India Pvt. Ltd., Bangalore (India) in the Karnatak University campus for the benefit of Biotechnology and Microbiology students. |
| ನಿರ್ಣಯ | | ETC ಸಸ್ಟಿನೇಬಲ್ ಡೇವಲ್‌ಪಮೆಂಟ್ ಫೌಂಡೇಶನ ಸಂಸ್ಥೆಯವರ statrt-up ನ್ನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾರಂಭ ಮಾಡುವುದರಿಂದ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಅವರ ಲ್ಯಾಬನಿಂದ ಉಪಯೋಗವಾಗುವುದರಿಂದ ಹಾಗೂ ವಿದ್ಯಾರ್ಥಿಗಳಿಗೆ Internship ಹಾಗೂ ಪ್ರಾಜೆಕ್ಟ ಮಾಡಲು ಅವಕಾಶ ಸಿಗಲಿರುವುದರಿಂದ ಪರಸ್ಪರ ಉಪಯುಕ್ತತೆ ಪರಿಗಣಿಸಿ, ಸದರಿಯವರಿಗೆ ಕಟ್ಟಡ ವಿಭಾಗದಿಂದ ನಿಗದಿಪಡಿಸಿದ ಬಾಡಿಗೆಯಲ್ಲಿ 25% ಬಾಡಿಗೆಯನ್ನು ಆಕರಿಸಿ ಎರಡು ವರ್ಷ ಕಾಲ ನೀಡಲು ಸಿಂಡಿಕೇಟ ಸಭೆಯು ಅನುಮೋದಿಸಿತು. |



ಕುಲಸಚಿವರು

ಕುಲಪತಿಗಳು